ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಅಗ್ರಹಾರ ದಾಸರಹಳ್ಳಿ ವಾರ್ಡ್ ಸಂಖ್ಯೆ: 105

ಸಂ: ಸ.ಅ(ವಾ-105)/ಪಿ.ಆರ್/ 35 /2021-22 ದಿನಾಂಕ: 29-01-2022.

## ವಾರ್ಡ್ ಸಮಿತಿ ಸಭೆಯ ನಡವಳಿ

ದಿನಾಂಕ: 29-01-2022 ರಂದು ವಾರ್ಡ್ ಸಂಖ್ಯೆ: 105 **ಅಗ್ರಹಾರ ದಾಸರಹಳ್ಳಿ ವಾರ್ಡ್**ನಲ್ಲಿ ಶ್ರೀ ಶಿವಸ್ವಾಮಿ ಮಾನ್ಯ ಜಂಟಿ ಆಯುಕ್ತರು(ಪ) ಬಿಬಿಎಂಪಿ ಹಾಗೂ ವಾರ್ಡ್ ನಂ. 105ರ ನೋಡಲ್ ಅಧಿಕಾರಿಗಳು ಇವರ ಅದ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿ

ಹಾಜರಿದ್ದ ಅಧಿಕಾರಿಗಳು/ನೌಕರರು:-

1) ಡಾ. ಅನಘಶ್ರೀ ಎಸ್. ಮೆಡಿಕಲ್ ಆಫೀಸರ್
2) ಶ್ರೀ ಸುರೇಶ್ ವಿ. ಎಸ್.ಎಚ್.ಐ
3) ಶ್ರೀ ರಂಗನಾಥ ಕೆ.ಆರ್, ಎಸ್.ಡಬ್ಲ್ಯೂ.ಐ
4) ಶ್ರೀ ಎಚ್.ಟಿ ನಾಗಣ್ಣಗೌಡ, ಹಿರಿಯ ಆರೋಗ್ಯ ಪರಿವೀಕ್ಷಕರು
5) ಶ್ರೀ ಬಸವರಾಜ್ಎಸ್.ಎಚ್, ವೈದ್ಯರು ಪ್ರಾಥಮಿಕಆರೋಗ್ಯಕೇಂದ್ರ, ಅ.ದಾಸರಹಳ್ಳಿ.
6) ಡಾ. ಅನ್ನಪೂರ್ಣ ಎಚ್. ಕೋವಿಡ್ ಮೆಡಿಕಲ್ ಆಫೀಸರ್
7) ಡಾ. ಎಸ್. ಅನ್ನಪೂರ್ಣ, ವೈಧ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಅ.ದಾಸರಹಳ್ಳಿ.
8) ಶ್ರೀ ರಾಜೇಂದ್ರ, ಕಂದಾಯ ಪರಿವೀಕ್ಷಕರು.
9) ಶ್ರೀ ಪ್ರಶಾಂತ್, ಕಂದಾಯ ಪರಿವೀಕ್ಷಕರು.
10) ಶ್ರೀ ಸೀತಾರಾಮ್, ಕರ ವಸೂಲಿಗಾರರು.
11) ಶ್ರೀ. ಅರುಣ್ ಕುಮಾರ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ ವಾರ್ಡ್ ನಂ. 106
12) ಶ್ರೀ ಕೆ.ಬಿ ರಾಜನಾಯಕ, ಬಿ.ಡಬ್ಲ್ಯೂ.ಎಸ್.ಎಸ್‌ಬಿ
13) ಶ್ರೀ ಆನಂದ್, ಹೆಚ್.ವಿ, ಸಹಾಯಕ ಅಭಿಯಂತರರು, ಬೆಸ್ಕಾಂ
14) ಶ್ರೀ ಸೈಯದ್ ಜಮೀಲ್, ಕಿರಿಯ ಅಭಿಯಂತರರು(ವಿ)
15) ಶ್ರೀ ಯೋಗೇಶ್ ಕುಮಾರ್ ಸಿ, ಪಿ.ಎಸ್.ಐ
16) ಶ್ರೀ ಗುರುಪ್ರಸಾದ್ ಡಿ, ಮಾರ್ಷಲ್
17) ಶ್ರೀ ವಿನೋದ್ ಎಂ. ಮಾರ್ಷಲ್

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಈ ಹಿಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಬಗ್ಗೆ ಚರ್ಚಿಸಲಾಯಿತು.
- ಮಾನ್ಯ ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕರೋನಾ ಸೋಂಕಿತರು ಹಾಗೂ ಲಸಿಕೆ ಪಡೆದಿರುವ ವಿವರಗಳನ್ನು ಶ್ರೀಮತಿ ಎನ್. ಅನ್ನಪೂರ್ಣ, ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಅಗ್ರಹಾರ ದಾಸರಹಳ್ಳಿ ರವರಿಂದ ಅಂಕಿಅಂಶಗಳನ್ನು ಪಡೆದುಕೊಂಡರು ಅದರಂತೆ ಪ್ರಸ್ತುತ 4 ನಂ. ಆಕ್ಟೀವ್ ಇದ್ದು ಎಲ್ಲವೂ ರಹೇಜಾ ಅಪಾರ್ಟ್‌ಮೆಂಟ್‌ನಲ್ಲಿರುವುದಾಗಿ ಮತ್ತು ಕೆಲವರು ಹೋಮ್ ಐಸೋಲೇಷನ್ ನಲ್ಲಿರುವುದಾಗಿ ಹಾಗೂ ಇದುವರೆಗೂ ಸುಮಾರು 1339 ನಂ. ಬೂಸ್ಟರ್ ಡೋಸ್ ನೀಡಿರುವುದಾಗಿ ವೈದ್ಯರು ತಿಳಿಸಿರುತ್ತಾರೆ
- ಅಧ್ಯಕ್ಷರು ಮಾತನಾಡಿ ಹಿರಿಯ ನಾಗರೀಕರುಗಳಿಗೆ ಶೀಘ್ರವಾಗಿ ಬೂಸ್ಟರ್ ಡೋಸ್ ನೀಡಬೇಕೆಂದು ಹಾಗೂ ವಾರ್ಡ್ ನಾಗರೀಕರು ಸಹಕರಿಸಬೇಕೆಂದು ತಿಳಿಸಿರುತ್ತಾರೆ.
- ವಾರ್ಡ್‌ನಲ್ಲಿ ಒಟ್ಟು 71 ಜನ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಜೆ.ಎಚ್.ಐ ತಿಳಿಸಿದ್ದು, ಎಲ್ಲರೂ ಬೂಸ್ಟರ್ ಡೋಸ್ ಪಡೆದುಕೊಳ್ಳಲು ಸಹಕರಿಸಬೇಕೆಂದು ಮಾನ್ಯ ಅಧ್ಯಕ್ಷರು ತಿಳಿಸಿರುತ್ತಾರೆ.
- ಶಾಲೆಗಳು ಪುನಃ ಪ್ರಾರಂಭವಾಗುತ್ತಿದ್ದು, ಸುಮಾರು 3700 ಜನರಿಗೆ ಲಸಿಕೆ ನೀಡಲು ಗುರಿ ಇರುವುದಾಗಿ ವೈದ್ಯರು ತಿಳಿಸಿರುತ್ತಾರೆ.
- ಕೋವಿಡ್‌ನಿಂದ ಮೃತಪಟ್ಟವರಿಗೆ ಇದುವರೆಗೂ ಪರಿಹಾರ ದೊರೆತಿರುವುದಿಲ್ಲ ಎಂದು ವಾರ್ಡ್ ನಾಗರೀಕರೊಬ್ಬರು ತಿಳಿಸಿದ್ದು, ಮಾನ್ಯ ಅಧ್ಯಕ್ಷರು ಮಾತನಾಡಿ ಕೂಡಲೇ ಒದಗಿಸುವುದಾಗಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ರಾತ್ರಿ ಹೊತ್ತು ಸರಿಯಾಗಿ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿಲ್ಲ ಮತ್ತು ಟೈಮರ್‌ಗಳನ್ನು ಅಳವಡಿಸಿರುವುದಿಲ್ಲ ಎಂದು ಸುದರ್ಶನ್ ಎಂಬ ನಾಗರೀಕರು ತಿಳಿಸಿದ್ದು, ಮಾನ್ಯ ಅಧ್ಯಕ್ಷರು ಕೂಡಲೇ ಸರಿಪಡಿಸುವಂತೆ ಶ್ರೀ ಸೈಯದ್ ಜಮೀಲ್, ಕಿರಿಯ ಅಭಿಯಂತರರು(ವಿ) ರವರಿಗೆ ತಿಳಿಸಿರುತ್ತಾರೆ.
- ಈ ವರ್ಷ ಅತಿ ಹೆಚ್ಚು ಮಳೆಯಿಂದಾಗಿ ಮನೆಗಳಿಗೆ ನೀರು ನುಗ್ಗಿದ್ದು, ಇದುವರೆಗೂ ಪರಿಹಾರ ದೊರೆತಿರುವುದಿಲ್ಲ ಎಂದು ನಾಗರೀಕರು ತಿಳಿಸಿದ್ದು, ಅಧ್ಯಕ್ಷರು ಮಾತನಾಡಿ ಪರಿಹಾರ ಒದಗಿಸುವುದಾಗಿ ತಿಳಿಸಿರುತ್ತಾರೆ.
- <u>ಸ್ವಚ್ಛತೆ ಮತ್ತು ಘನತ್ಯಾಜ್ಯ ವಿಲೇವಾರಿ ಬಗ್ಗೆ</u>:- ಮಾನ್ಯ ಅಧ್ಯಕ್ಷರು ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ವಾರ್ಡ್‌ನಲ್ಲಿರುವ ಬ್ಲಾಕ್ ಸ್ಪಾಟ್‌ನ ವಿವರಗಳನ್ನು ಪಡೆದುಕೊಂಡು ಕೂಡಲೇ ಎಲ್ಲಾ ರಸ್ತೆಗಳಲ್ಲಿ ಕಸವನ್ನು ಶೀಘ್ರವಾಗಿ ತೆರವುಗೊಳಿಸಬೇಕೆಂದು ಸೂಚಿಸಿದರು.

* ವಾರ್ಡ್ ವ್ಯಾಪ್ತಿಯ ಮಸೀದಿಯ ಹತ್ತಿರವಿರುವ ಖಾಲಿ ಸೈಟ್‌ನಲ್ಲಿ ಕಸ ಸುರಿಯುತ್ತಿದ್ದು ಕೂಡಲೇ ಪಕ್ಕದ ನಿವಾಸಿಗಳು ತಿಳಿಸಿದ್ದು, ಸಂಭಂದಿಸಿದವರು ಕ್ರಮ ಕೈಗೊಳ್ಳಲು ಮಾನ್ಯ ಅಧ್ಯಕ್ಷರು ತಿಳಿಸಿರುತ್ತಾರೆ.
* ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಯಾವುದೇ ದೂರುಗಳು ಇರುವುದಿಲ್ಲ ಎಂದು ಬಿಡಬ್ಲ್ಯೂಎಸ್‌ಎಸ್‌ಬಿ ಸಿಬ್ಬಂದಿ ಮಾನ್ಯ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.
* ವಾರ್ಡ್ ವ್ಯಾಪ್ತಿಯ ವಿವೇಕಾನಂದ ಪಾರ್ಕ್‌ನಲ್ಲಿ ಸಂಜೆ/ರಾತ್ರಿ ಹೊತ್ತು ಸೊಳ್ಳೆಗಳು ಹೆಚ್ಚಿದ್ದು ಔಷದ ಸಿಂಪಡಣೆಯನ್ನು ವಾರಕ್ಕೊಮ್ಮೆ ಮಾಡಬೇಕೆಂದು ಪಾರ್ಕ್‌ನ ಅಕ್ಕಪಕ್ಕದ ನಿವಾಸಿಗಳು ತಿಳಿಸಿದ್ದು, ಮಾನ್ಯ ಅಧ್ಯಕ್ಷರು ಹಿರಿಯ ಆರೋಗ್ಯ ಅಧಿಕಾರಿಗಳಿಗೆ ಕೂಡಲೇ ಔಷದ ಸಿಂಪಡಿಸಲು ಸೂಚಿಸಿರುತ್ತಾರೆ.
* ರಸ್ತೆ ಗುಂಡಿಗಳನ್ನು ಮುಚ್ಚಿರುವ ವರದಿಯನ್ನು ವಾರ್ಡ್ ಅಭಿಯಂತರರಿಂದ ಮಾನ್ಯ ಅಧ್ಯಕ್ಷರು ಪಡೆದುಕೊಂಡರು. ಅದರಂತೆ ಶೇ.90 ರಷ್ಟು ಮುಚ್ಚಿರುವುದಾಗಿ ಅಭಿಯಂತರರು ತಿಳಿಸಿರುತ್ತಾರೆ.
* ರಾತ್ರಿ ಹೊತ್ತು ಯಾವುದೇ ಅವಘಡಗಳು ಸಂಭವಿಸದಂತೆ ಪಟ್ರೋಲಿಂಗ್ ಮಾಡಬೇಕೆಂದು ಮಾನ್ಯ ಅಧ್ಯಕ್ಷರು ಪೋಲಿಸ್ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.
* ವಾರ್ಡ್ ವ್ಯಾಪ್ತಿಯಲ್ಲಿ ಕ್ಯಾಮರಾಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಮತ್ತು ಸಂಶಯಾಸ್ಪದ ವ್ಯಕ್ತಿಗಳ ಮೇಲೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರು ಪೋಲಿಸ್ ಅಧಿಕಾರಿಗಳಿಗೆ ತಿಳಿಸಿದರು.
* 4ನೇ ಬಿ ಮುಖ್ಯರಸ್ತೆಯಲ್ಲಿ ಒಣಗಿದ ಮರವಿದ್ದು ಕೂಡಲೇ ತೆರವುಗೊಳಿಸಲು ನಾಗರೀಕರು ಮನವಿ ಸಲ್ಲಿಸಿದ್ದು, ಅಧ್ಯಕ್ಷರು ಕೂಡಲೇ ತೆರವುಗೊಳಿಸಲು ಅರಣ್ಯಾಧಿಕಾರಿಗಳಿಗೆ ಸೂಚಿಸಿರುತ್ತಾರೆ.
* ವಾರ್ಡ್‌ನ ವ್ಯಾಪ್ತಿಯಲ್ಲಿ ಬೆಸ್ಕಾಂ ವತಿಯಿಂದ ಟ್ವಿಸ್ಟೆಡ್ ಕೇಬಲ್ ಅಳವಡಿಸುತ್ತಿದ್ದು, ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸಹಾಯಕ ಅಭಿಯಂತರರು ಮಾನ್ಯ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳಲು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಲು ಸೂಚಿಸಿ ಮುಂದಿನ ಸಭೆಗೆ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಹಾಜರಿರಲು ತಿಳಿಸಿ ಸಭೆಯನ್ನು ಮುಕ್ತಾಯ ಮಾಡಿದರು.

| | |
|---|---|
| 29/01/2022 | 29/1/22 |
| ಸದಸ್ಯ ಕಾರ್ಯದರ್ಶಿ | ವಾರ್ಡ್ ಸಮಿತಿ ಅಧ್ಯಕ್ಷರು |
| ಹಾಗೂ ಸಹಾಯಕಅಭಿಯಂತರರು | ಹಾಗೂ ವಾರ್ಡ್ ನೋಡಲ್‌ಅಧಿಕಾರಿಗಳು |
| ವಾರ್ಡ್ ನಂ. 105ಅಗ್ರಹಾರ ದಾಸರಹಳ್ಳಿ | ವಾರ್ಡ್ ನಂ. 105 ಅಗ್ರಹಾರ ದಾಸರಹಳ್ಳಿ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |